

> **ಹೆಣ್ಣಿಗೆ ಜ್ವರ ಬಂದ್ರೂ, ಕಾಯಿಲೆ ಬಿದ್ರೂ ದುಡಿಯಲೇ ಬೇಕು ಎಂಬ ವಾತಾವರಣ ಈಗಲೂ ಇದೆ.**

ನಾಮನಿರ್ದೇಶಿತ ಸದಸ್ಯೆಯಾಗಿ ಆಯ್ಕೆ ಮಾಡಿತು. ಅಲ್ಲೂ ನನ್ನ ಹೆಜ್ಜೆಗುರುತುಗಳನ್ನು ಮೂಡಿಸಿದ್ದೇನೆ.

ನಾಟಕ ಮತ್ತು ಸಂಗೀತದ ಅನುಭವ ಅನನ್ಯ. ಇವುಗಳನ್ನು ಪದಗಳಲ್ಲಿ ಹೇಳಲಾಗುವುದಿಲ್ಲ. ಆದರೆ ನಾಟಕದ ಪಾತ್ರಗಳಿಗೆ ಜೀವ ತುಂಬುವ ಕೆಲಸವನ್ನು ಆರಂಭದಿಂದಲೂ ಶ್ರದ್ಧೆಯಿಂದ ಮಾಡುತ್ತಾ ಬಂದೆ. ಮನೆಯಲ್ಲಿ ತಾಯಿಯೂ ನನಗೆ ಬಹಳ ಪ್ರೋತ್ಸಾಹ ಕೊಡುತ್ತಿದ್ದರು. ಎಷ್ಟೆಂದರೆ ನಾನು ಚಿಕ್ಕವಳಿರುವಾಗ ನಾಟಕ ಮುಗಿಸಿ ಹೊರಗೆ ಬಂದರೆ  ತಾಯಿ ನನಗೆ ದೃಷ್ಟಿ ತೆಗೆಯುತ್ತಿದ್ದರು. ಅವರೆಲ್ಲರ ಪ್ರೀತಿ, ಪ್ರೋತ್ಸಾಹ ನನ್ನ ಸಾಧನೆಗೆ ಸ್ಫೂರ್ತಿ. ರಂಗಭೂಮಿಯಲ್ಲಿ ಅಪಾರ ಆಸಕ್ತಿ ಇದ್ದಿದ್ದರಿಂದ ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾಲ್ಲಿ ತರಬೇತಿ ಪಡೆದೆ.

ಮದುವೆ ಆದ ಮೇಲೂ ಅಷ್ಟೆ. ಪತಿ ಕೆ. ಆನಂದ ರಾಜು ನನ್ನೆಲ್ಲ ಚಟುವಟಿಕೆಗಳಿಗೆ ಬಹಳ ಪ್ರೋತ್ಸಾಹ ಕೊಡ್ತಾ ಬಂದಿದ್ದಾರೆ. ನಾಟಕ ರಂಗ ಇನ್ನಷ್ಟು ಬೆಳೀಬೇಕು. ಅದಕ್ಕಾಗಿ 1976ರಲ್ಲಿ  ಬೆಂಗಳೂರಿನಲ್ಲಿ ಸ್ಪಂದನ ಥಿಯೇಟರ್ ಎಂಬ ಹವ್ಯಾಸಿ ತಂಡದಲ್ಲಿ ದುಡಿಯುತ್ತಾ ಬಂದೆ. ನಾಟಕದಲ್ಲಿ ಪ್ರಯೋಗ, ಶಿಬಿರ, ಉಪನ್ಯಾಸ, ತರಬೇತಿ ನಡೆಸುತ್ತಾ ಆಸಕ್ತರಲ್ಲಿ ನಾಟಕದ ಅಭಿರುಚಿ ಹುಟ್ಟಿಸುವ ಕೆಲಸ ಮಾಡಿದೆ. ಈಗಲೂ ಅಷ್ಟೆ. ನಮ್ಮ ತಂಡದಲ್ಲಿ ಪುರುಷ–ಸ್ತ್ರೀ ಎಂಬ ತಾರತಮ್ಯ ಇಲ್ಲ, ಆ ತಾರತಮ್ಯ ಕಲೆ, ಸಂಗೀತ, ನೃತ್ಯ ಯಾವ ರಂಗದಲ್ಲೂ ಇಲ್ಲ. ಹೀಗಾಗಿ ಜೀವನದಲ್ಲಿ ಎಲ್ಲವೂ ಸ್ವಾರಸ್ಯಕರವೇ. ನಾನು ಜೀವನವನ್ನು ಪ್ರೀತಿ ಮಾಡ್ತೀನಿ, ಕಷ್ಟ–ಸುಖ ಎರಡನ್ನೂ ಪ್ರೀತಿ ಮಾಡ್ತೀನಿ. ವೈಯಕ್ತಿಕವಾಗಿ ನನ್ನನ್ನು ಕೇಳಿದರೆ– ನನಗೆ ಸ್ವಾತಂತ್ರ್ಯ ಸಿಕ್ಕಿದೆ.

ಆದರೆ ಎಲ್ಲರಿಗೂ ಸಿಕ್ಕಿದೆಯೆ? ಹಿಂದಿನ ಕಾಲದ ಮಹಿಳೆಯರ ಸ್ಥಿತಿಗತಿಗೂ ಇಂದಿನ ಕಾಲದ್ದಕ್ಕೂ ಸಾಕಷ್ಟು ಬದಲಾವಣೆಗಳಾಗಿವೆ. ಆದರೆ ಮಹಿಳೆ ಎಷ್ಟೇ ಸುಧಾರಣೆ ಆಗಿದ್ದಾಳೆ ಎಂದರೂ ಮಹಿಳೆ ಸ್ವಾತಂತ್ರ್ಯಕ್ಕಾಗಿ ಮಾಡುವ ಹೋರಾಟ ಮಾತ್ರ ಇನ್ನೂ ನಿಂತಿಲ್ಲ. ಅದು ನಿರಂತರ ಹೋರಾಟ. ನಮ್ಮಲ್ಲಿ ಪುರುಷ ಪ್ರಧಾನ ಸಮಾಜ ಇರೋದ್ರಿಂದ ಯಾವುದೇ ಮಹಿಳೆಗೆ ಪುರುಷನ ಸಹಕಾರ, ಬೆಂಬಲ ಬೇಕೇ ಬೇಕು. ಸ್ವಾತಂತ್ರ್ಯ ಎನ್ನೋದು ಮನೆಯಿಂದಲೇ ಶುರುವಾಗಬೇಕು ಎಂಬುದು ಬಹುತೇಕ ಎಲ್ಲ ಮಹಿಳೆಯರ ಅಭಿಪ್ರಾಯ. ಮನೆಯಲ್ಲಿ ಮಕ್ಕಳು ಬೆಳೆಯುತ್ತಾ ಹೋದಂತೆ ತಾಯಿಯ ಮೇಲೆ ರೇಗುವುದಕ್ಕೆ ಶುರು ಮಾಡ್ತಾರೆ, ಆದರೆ ತಂದೆ ಮೇಲೆ ರೇಗಲ್ಲ. ಅಲ್ಲಿಂದಲೇ ನಾವು ಸ್ವಾತಂತ್ರ್ಯ ಕಳೆದುಕೊಳ್ಳುತ್ತಾ ಹೋಗ್ತೀವಿ. ತಾಯಿ ಆದವಳು ಮಕ್ಕಳ ಆಸೆ ಆಕಾಂಕ್ಷೆಗಳಿಗೆ ತಲೆಬಾಗ್ತಾ ಹೋಗ್ತಾಳೆ. ಕುಟುಂಬದಲ್ಲಿ ಏನೇ ಆಗಲಿ, ಹೆಣ್ಣು ತಾಳ್ಮೆಯಿಂದ, ಸಮಾಧಾನದಿಂದ ಸಂಸಾರವನ್ನು ಮುನ್ನಡೆಸುತ್ತಾಳೆ. ತನ್ನ ಒತ್ತಾಸೆಗಳಿಗೆ ಬೆಲೆ ಸಿಗದಿದ್ದರೂ ಕೂಡ. ಇದೂ ಸ್ವಾತಂತ್ರ್ಯದ ಒಂದು ರೂಪ ತಾನೆ?

ಕೆಲವು ಮಹಿಳೆಯರು ಸನ್ನಿವೇಶಗಳನ್ನು ಸಮರ್ಥವಾಗಿ ನಿಭಾಯಿಸ್ತಾ ಇದ್ದಾರೆ. ನಾನೂ ಎಲ್ಲ ಸಂದರ್ಭಗಳನ್ನು, ಸನ್ನಿವೇಶಗಳನ್ನು ನಿಭಾಯಿಸ್ತಾ ಹೋಗ್ತೀನಿ. ನನ್ನ ಆಕಾಂಕ್ಷೆಗಳಿಗೆ ವಿರುದ್ಧವಾಗಿ ಮಾತನಾಡಿದ್ರೆ ಒರಟಾಗಿ ಉತ್ತರ ಕೊಡ್ತೀನಿ, ಕೆಲವೊಮ್ಮೆ ಉತ್ತರವನ್ನೇ ಕೊಡದೆ ಹೋಗಬಹುದು. ಆದರೆ ಎಲ್ಲ ಮಹಿಳೆಯರು ಹೀಗೆ ಮಾಡೋದಕ್ಕೆ ಸಾಧ್ಯನಾ? ಸಹಿಸೋದು, ನಿಭಾಯಿಸೋದು ಹೆಣ್ಣಿಗೆ ಹುಟ್ಟಿನಿಂದಲೇ ಬಂದಿದೆ. ಮನೆ ಕೆಲಸಕ್ಕೆ ಬರುವ ಹೆಂಗಸರನ್ನೇ ನೋಡಿ. ಮನೆ ಮನೆಗಳಲ್ಲಿ ಕಸ ಮುಸುರೆ ತೊಳೆದು ಬಂದ ಹಣದಿಂದ ಮಕ್ಕಳನ್ನು ಶಾಲೆಗೆ ಕಳಿಸಿ ಓದಿಸ್ತಾರೆ. ಹೆಣ್ಣಿಗೆ ಜ್ವರ ಬಂದ್ರೂ, ಕಾಯಿಲೆ ಬಿದ್ರೂ ದುಡಿಯಲೇ ಬೇಕು ಎಂಬ ವಾತಾವರಣ ಈಗಲೂ ಸಮಾಜದಲ್ಲಿದೆ. ಇವರ ಗಂಡಂದಿರು ಹೊರಗೆ ದುಡಿದು ಬಂದರೂ ಕುಡಿದು ಆರಾಮವಾಗಿ ಇರ್ತಾರೆ. ಹಾಗಾದರೆ ಹೆಣ್ಣಿಗೆ ಎಲ್ಲಿ ಸ್ವಾತಂತ್ರ್ಯ ಸಿಕ್ಕಿದೆ..? ಆರ್ಥಿಕವಾಗಿ, ಸಾಮಾಜಿಕವಾಗಿ, ಕೌಟುಂಬಿಕ ಮಟ್ಟದಲ್ಲಿ ಹೆಣ್ಣು ಸ್ವತಂತ್ರಳು ಎಂದು ಅನಿಸಬೇಕಾದರೆ ಅವಳ ಪರವಾದ ಹೋರಾಟ  ನಿರಂತರವಾಗಿ ನಡೆಯಬೇಕು.

ರಂಗಭೂಮಿಯನ್ನೇ ತೆಗೆದುಕೊಂಡರೆ, ಹಿಂದೆ ಮಹಿಳೆಯರು ಆಚೆ ಹೆಚ್ಚು ಓಡಾಡ್ತಾ ಇರಲಿಲ್ಲ. ನಾಟಕದವರನ್ನು ನಿಕೃಷ್ಟವಾಗಿ ನೋಡುವ ಮಂದಿಯೇ ಹೆಚ್ಚಿದ್ದರು. ಆದರೆ ಈಗ ನಾಟಕದವರನ್ನು ಗೌರವಿಸ್ತಾರೆ. ಇಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಆದರೆ ಇದು ಸಾಲದು. ಇನ್ನಷ್ಟು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಬೇಕು. ನಮಗೆ ಸ್ವಾತಂತ್ರ್ಯ ಬಂದರೂ, ಮಹಿಳೆಯರು ಹೋರಾಟ ಮಾಡಬೇಕಾದ ಪರಿಸ್ಥಿತಿ ಇನ್ನೂ ಇದೆ.

ಇಂದು ಸಮಾಜದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಾಗ್ತಾ ಇದೆ. ಇದು ಯಾಕೆ ಹೆಚ್ಚಾಗ್ತಾ ಇದೆ? ಮಹಿಳೆ ಕ್ರೀಡೆ, ಶಿಕ್ಷಣ, ಸಾಹಿತ್ಯ, ಸಂಗೀತ.. ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸ್ತಾ ಇದ್ದಾಳೆ. ಇದನ್ನು ನೋಡಿದ್ರೆ ಬಹುಶಃ ಕೆಲವು ಪುರುಷರಿಗೆ ಹೊಟ್ಟೆಕಿಚ್ಚು ಆಗುತ್ತಾ ಎಂಬ ಸಂಶಯ ಬರ್ತಾ ಇದೆ. ಮನಸ್ಸು ವಿಕೃತವಾದಾಗ ದೌರ್ಜನ್ಯ ಹೆಚ್ಚಾಗುತ್ತೆ. ಇದಕ್ಕೆ ಮಹಿಳೆಯರೇ ಬಲಿಯಾಗ್ತಾರೆ. ಇದು ದುರಂತವೇ ಸರಿ.

ನಾಟಕ ರಂಗದಲ್ಲೇ ಆಗಲಿ, ಇಂದು ಒಬ್ಬ ಮಾರ್ಗದರ್ಶನ ಮಾಡುವವರು ಇಲ್ಲ ಎಂಬಂತಾಗಿದೆ. ನಾಟಕದಲ್ಲಿ ಶ್ರೀರಂಗಂ, ಬಿ.ವಿ. ಕಾರಂತ, ಶಿವರಾಮ ಕಾರಂತ ಎಲ್ಲರೂ ಸಾಕಷ್ಟು ದುಡಿದವರು. ಇವರೆಲ್ಲ ಕಳಚಿ ಹೋಗಿದ್ದಾರೆ. ಈಗ ಥಿಯೇಟರ್ ಪರಿಚಯವೇ ಅನೇಕ ಮಕ್ಕಳಿಗೆ ಇಲ್ಲ. ಇವರಿಗೆಲ್ಲ ದಾರಿ ತೋರಿಸುವ ‘ಐಕಾನ್'ಗಳು ಬೇಕಾಗಿದ್ದಾರೆ. ಕಲೆ, ಸಾಹಿತ್ಯ, ಸಂಗೀತಗಳಲ್ಲಿ ಮನಸ್ಸು ತೊಡಗಿಸಿಕೊಂಡರೆ ವಿಕೃತಿಗೆ ಅವಕಾಶವೇ ಇರೋದಿಲ್ಲ.

ಒಟ್ಟಿನಲ್ಲಿ ಸಮಾಜ ಇನ್ನಷ್ಟು ಬದಲಾಗಬೇಕು. ಇದಕ್ಕಾಗಿ ಮಹಿಳೆಯರು ಹೋರಾಟ ನಡೆಸುತ್ತಲೇ ಇರಬೇಕು. ಇದು ಎಲ್ಲಿಯವರೆಗೆ ಮುಟ್ಟಬೇಕೋ ಗೊತ್ತಾಗ್ತಾ ಇಲ್ಲ. ನನ್ನ ಕೇಳಿದರೆ, ಸ್ವತಂತ್ರ ಭಾರತದಲ್ಲಿ ಮಹಿಳೆಯರಿಗೆ ಎಲ್ಲಿದೆ ಸ್ವಾತಂತ್ರ್ಯ...?